ನಂತರ ಹೊರಗಿನ ಸಂಸ್ಥೆಗಳಿಂದ ಆರ್ಥಿಕ ಸಹಾಯ ಪಡೆದು 1998-99ರಲ್ಲಿ ಈ ಯೋಜನೆಯನ್ನು ಅಂದರೆ, ವಿತರಣಾ ವ್ಯವಸ್ಥೆಯನ್ನು, ಗದಗ್‌ಗೆ ಆಗಬೇಕಾಗಿರುವುದನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಡಿ.ಆರ್.ಪಾಟೀಲ್: ಪೂರ್ತಿಗೊಳಿಸಲಾಗುವುದು ಎಂದು ಹೇಳಿ.

ಶ್ರೀ ಬಿ.ಎನ್.ಬಚ್ಚೇಗೌಡ: ಆಯಿತು, ಪೂರ್ತಿಗೊಳಿಸಲಾಗುವುದು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ವಿಶೇಷ ಘಟಕ ಯೋಜನೆಗೆ ನೀಡಿರುವ ಸಹಾಯಧನ

44 (166)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಜನವರಿವರೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ವಿಶೇಷ ಘಟಕ ಯೋಜನೆಯಲ್ಲಿ ಬಿಡುಗಡೆಯಾಗಿರುವ ಸಹಾಯಧನವೆಷ್ಟು?

ಆ) ಸದರಿ ಸಹಾಯಧನವನ್ನು ಎಷ್ಟು ಫಲಾನುಭವಿಗಳಿಗೆ ನೀಡಲಾಗಿದೆ ನೀಡಲಾಗದಿದ್ದಲ್ಲಿ ಕಾರಣಗಳೇನು? (ವಿವರ ನೀಡುವುದು)

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) 1997-98ನೇ ಜನವರಿವರೆಗೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಿಗೆ ವಿಶೇಷ ಘಟಕ ಯೋಜನೆಯಡಿ ಈ ಕೆಳಗಿನಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

ಯೋಜನೆಯ ಹೆಸರು	ದಕ್ಷಿಣಕನ್ನಡ	ಉಡುಪಿಜಿಲ್ಲೆ
		(ರೂ.ಲಕ್ಷಗಳಲ್ಲಿ)
ವಿಶೇಷ ಘಟಕ ಯೋಜನೆ ರಾಜ್ಯ ಯೋಜನೆ	75.07	104.04
ವಿಶೇಷ ಕೇಂದ್ರೀಯ ಸಹಾಯಧನ	11.88	8.17
ಒಟ್ಟು	86.95	112.21

ಆ) ಸಹಾಯಧನವನ್ನು ದಕ್ಷಿಣ ಕನ್ನಡ ಜಿಲ್ಲೆಯ 2256 ಫಲಾನುಭವಿಗಳಿಗೆ ಮತ್ತು ಉಡುಪಿ ಜಿಲ್ಲೆಯ 1706 ಫಲಾನುಭವಿಗಳಿಗೆ ನೀಡಲಾಗಿದೆ.

ಶ್ರೀ ಯು.ಆರ್.ಸಭಾಪತಿ: ಸನ್ಮಾನ್ಯ ಸಭಾಧ್ಯಕ್ಷರೆ, 1997-98ನೇ ಸಾಲಿನಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರಾತಿಯಾದ ಹಣ ಎಷ್ಟು, ಮಂಜೂರಾತಿಯಾದ ಹಣದಲ್ಲಿ ಬೇರೆ ಇಲಾಖೆಗೆ ಹಣವನ್ನು ವರ್ಗಾವಣೆ ಮಾಡಿದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ? ಫಲಾನುಭವಿಗಳ ಆಯ್ಕೆಯಲ್ಲಿಯೂ ಕೂಡ ದುರುಪಯೋಗ ಆಗಿದೆ ಎನ್ನುವಂಥ ವಿಚಾರ ಕೂಡ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಸಭಾಧ್ಯಕ್ಷರೇ, ಈ ವಿಶೇಷ ಘಟಕ ಯೋಜನೆಯಡಿಯಲ್ಲಿ ಬರತಕ್ಕ ಹಣವನ್ನು ನಾವು ಜಿಲ್ಲಾಪರಿಷತ್ತಿಗೆ ವರ್ಗಾಯಿಸುತ್ತೇವೆ. ಮಾನ್ಯ ಸದಸ್ಯರು ಇದು ದುರುಪಯೋಗವಾಗಿದೆಯೇ ಎಂದು ಕೇಳಿದ್ದರೆ, ಅದರ ಬಗ್ಗೆ ನಾನು ಮಾಹಿತಿಯನ್ನು ತರಿಸುತ್ತಿದ್ದೆ. ಯಾವ ರೀತಿ ದುರುಪಯೋಗವಾಗಿದೆ ಎಂದು ಹೇಳುತ್ತಿದ್ದೆ. ಅವರು ಆ ಪ್ರಶ್ನೆಯನ್ನು ಕೇಳಿಲ್ಲ. ಫಲಾನುಭವಿಗಳ ಅಂಕಿಸಂಖ್ಯೆಯನ್ನು ಕೊಟ್ಟಿದ್ದೇನೆ. ಎಷ್ಟು ಹಣ ಬಿಡುಗಡೆಯಾಗಿದೆ ಎಂಬುದನ್ನು ಕೊಟ್ಟಿದ್ದೇನೆ. ಉಡುಪಿ ಮೊನ್ನೆ ತಾನೆ ಅಸ್ತಿತ್ವಕ್ಕೆ ಬಂದ ಜಿಲ್ಲೆ. ಉಡುಪಿ ಜಿಲ್ಲೆಗೂ ಕೂಡ ಜಿಲ್ಲಾ ಪಂಚಾಯಿತಿಯಿಂದ ಇಷ್ಟು ಹಣ ಖರ್ಚಾಗಿದೆ ಎಂದು ಕೊಟ್ಟಿದ್ದೇವೆ. ನಿಮ್ಮ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಒದಗಿಸಿದ್ದೇವೆ.

ಶ್ರೀ ಯು.ಆರ್.ಸಭಾಪತಿ: ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾತಿಯಾದ ಹಣದಲ್ಲಿ 50 ಲಕ್ಷಕ್ಕೂ ಮಿಕ್ಕಿದ ಹಣವನ್ನು ಬೇರೆ ಇಲಾಖೆಗೆ ವರ್ಗಾಯಿಸಿದ ಮಾಹಿತಿ ತಮಗೆ ಬಂದಿದೆಯೇ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಈ ವಿಶೇಷ ಘಟಕ ಯೋಜನೆಯಲ್ಲಿ ಸುಮಾರು 38 ಇಲಾಖೆಗಳಲ್ಲಿ ಈ ಹಣ ಹರಿದು ಹೋಗುತ್ತದೆ. ರೇಷ್ಮೆ ಇಲಾಖೆಗೆ ಹೋಗುತ್ತದೆ, ಆಮೇಲೆ ಕೈಗಾರಿಕಾ ಇಲಾಖೆಗೆ ಹೋಗುತ್ತದೆ, ಆಮೇಲೆ ವ್ಯವಸಾಯ ಇಲಾಖೆಗೆ ಹೋಗುತ್ತದೆ. ಈ ರೀತಿ ವಿಶೇಷ ಘಟಕ ಯೋಜನೆಯ ಹಣವನ್ನು ವಿವಿಧ ಇಲಾಖೆಗಳಿಗೆ ಕೊಡಲಾಗುತ್ತದೆ. ದಯಮಾಡಿ, ಪಟ್ಟಿ ಕೊಟ್ಟಿದ್ದೇವೆ ನೋಡಿ. ಯಾವ ಯಾವ ಇಲಾಖೆಯಿಂದ, ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಹೇಳಿದ್ದೇವೆ.

ಶ್ರೀ ಯು.ಆರ್.ಸಭಾಪತಿ: ಫಲಾನುಭವಿಗಳ ಆಯ್ಕೆಯಲ್ಲಿ ಕೆಲವರು ಪ್ರಮಾಣ ಪತ್ರ ಕೊಟ್ಟು, ಪ್ರಯೋಜನವನ್ನು ಪಡೆದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಬಂದಿದೆಯೇ? ಅನೇಕ ಫಲಾನುಭವಿಗಳನ್ನು ಗುರುತಿಸಿ, ಸುಳ್ಳು ಪ್ರಮಾಣಪತ್ರಗಳನ್ನು ಕೊಟ್ಟು ಫಲಾನುಭವವನ್ನು ಪಡೆದುಕೊಂಡ ಬಗ್ಗೆ ತಮಗೆ ಮಾಹಿತಿ ಬಂದಿದೆಯೇ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಅವರು ದುರುಪಯೋಗವಾಗಿದೆ ಎಂಬ ಬಗ್ಗೆ ಕೇಳಲಿಲ್ಲ. ತಾವು ಕೇಳಿರತಕ್ಕ ಪ್ರಶ್ನೆ, ಎಷ್ಟು ಹಣ ಖರ್ಚಾಗಿದೆ, ಎಷ್ಟು ಫಲಾನುಭವಿಗಳು ಇದ್ದಾರೆ ಎಂದು ಕೇಳಿದ್ದೀರಿ. ಮಾನ್ಯ ಸದಸ್ಯರು ಬೇರೆ ವಿಚಾರಗಳನ್ನೂ ನಮ್ಮ ಗಮನಕ್ಕೆ ತಂದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನೂ ಮಾಡುತ್ತೇವೆ.

ಮಂಗಳೂರು ಸೌಂದರೀಕರಣ.

45 (223)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರಪಾಲಿಕೆಗೆ 66ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನಗರ ಸೌಂದರೀಕರಣಕ್ಕಾಗಿ ಹಾಗೂ ಅಭಿವೃದ್ಧಿ ಚಟುವಟಿಕೆಗೆ 50 ಲಕ್ಷ ರೂಪಾಯಿಗಳ ಬಿಡುಗಡೆಯಾಗಿರುವುದು ನಿಜವೇ?

ಆ) ಹಾಗಿಲ್ಲದಿದ್ದರೆ ಎಷ್ಟು ಹಣ ಬಿಡುಗಡೆಯಾಗಿದೆ, ಬಾಕಿಯಿರುವ ಹಣವೆಷ್ಟು ಹಾಗೂ ಇದನ್ನು ಯಾವಾಗ ಬಿಡುಗಡೆ ಮಾಡಲಾಗುವುದು.

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ಸಚಿವರು):

ಅ) ಸದರಿ ಉದ್ದೇಶಕ್ಕಾಗಿ ರೂ.25-00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಆ) ಮೇಲಿನ ಉದ್ದೇಶಕ್ಕೆ ಹೆಚ್ಚಿನ ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್.ಯೋಗೀಶ್ ಭಟ್: ಮಂಗಳೂರಿನಲ್ಲಿ 66ನೇ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಅದರ ಪೂರ್ಣವಾದ ಜವಾಬ್ದಾರಿಯನ್ನು ಭರಿಸುವಂತೆ ನಾವು ಒಂದು ಬೇಡಿಕೆಯನ್ನು ಇಟ್ಟಿದ್ದೆವು. ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾಸನಕ್ಕೆ 75 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. 25 ಲಕ್ಷ ರೂಪಾಯಿಗಳನ್ನು ನಗರದ ಸೌಂದರೀಕರಣಕ್ಕಾಗಿ ಮಂಗಳೂರಿಗೆ ಕೊಟ್ಟಿದ್ದೀರಿ, ಮಂಗಳೂರಿಗೆ ಕನಿಷ್ಟ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಾನು ಮತ್ತು ಸನ್ಮಾನ್ಯ ಮೇಯರ್‌ರವರು ವಿನಂತಿ ಮಾಡಿಕೊಂಡಿದ್ದೆವು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಾರ್ವಜನಿಕವಾದ ಒಂದು ಆಶ್ವಾಸನೆಯನ್ನು ಕೊಟ್ಟರು, 50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು, ಆದರೆ ಬಿಡುಗಡೆ ಮಾಡಿದ್ದು ಕೇವಲ 25 ಲಕ್ಷ ರೂಪಾಯಿಗಳು ಮಾತ್ರ. ಎಲ್ಲಾ ಲೆಕ್ಕವನ್ನು ಮಾಡಿ ಒಂದು ತಿಂಗಳಲ್ಲಿ ಲೆಕ್ಕವನ್ನು ಚುಕ್ತಾ ಮಾಡಿದ್ದೇವೆ. ನೀವು ಕೊಡುತ್ತೇವೆಂದು ಹೇಳಿರುವ ಹಣದಲ್ಲಿ ನಗರದ ಸೌಂದರೀಕರಣಕ್ಕಾಗಿ ಮತ್ತು